ಯುವವೇದಿಕೆ

# ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು ಹೇಗೆ ?

**ಹಳೇಕೋಟೆ ಎನ್. ರಮೇಶ**

**ವ್ಯಕ್ತಿತ್ವದ ಬೆಳವಣಿಗೆಯ ವಿವಿಧ ಅಂಶಗಳನ್ನು ವಿವರಿಸಿರುವ ಶ್ರೀ ರಮೇಶ ಅವರು ಮೂಡಿಗೆರೆಯಲ್ಲಿ ಕೃಷಿಕರಾಗಿರುವರು.**

ಪ್ರತಿಯೊಬ್ಬರಿಗೂ ತಮ್ಮ ಸ್ವಭಾವಗಳಿಂದ ತಮ್ಮದೇ ಭಾವನೆಗಳಿಂದ ಕೂಡಿದ ಒಂದು ವ್ಯಕ್ತಿತ್ವವಿರುತ್ತದೆ. ತಮ್ಮ ಈ ವ್ಯಕ್ತಿತ್ವವನ್ನು ಸರಿಯಾಗಿ ಕಂಡುಕೊಂಡು ರೂಪಿಸಿಕೊಳ್ಳಬೇಕು. ಹೀಗೆ ರೂಪಿಸಿಕೊಂಡು ಅದನ್ನು ಇನ್ನೂ ಉತ್ತಮವಾಗಿ ಬೆಳೆಸಿ ಪೋಷಿಸಲು ಸಾಕಷ್ಟು ಪ್ರಯತ್ನಿಸಬೇಕು. ಇದನ್ನು ಸಾಧಿಸಿಕೊಂಡರೆ ಜೀವನದಲ್ಲಿ ಜಯ, ನೆಮ್ಮದಿ, ಕೀರ್ತಿ ಎಲ್ಲವೂ ಲಭಿಸುತ್ತದೆ. ಮನಶ್ಶಾಸ್ತ್ರಜ್ಞರು ಹೇಳುತ್ತಾರೆ: "ಪ್ರತಿಯೊಬ್ಬ ಮಾನವನೂ ಹಿಂದೆಂದೂ ಹುಟ್ಟಿರದ ಸಂಪೂರ್ಣ ಹೊಸ ವ್ಯಕ್ತಿಯಾಗಿಯೆ ಹುಟ್ಟುತ್ತಾನೆ. ಪ್ರತಿಯೊಬ್ಬನೂ ಜೀವನದಲ್ಲಿ ಜಯಗಳಿಸುವ ಸಾಮರ್ಥ್ಯದಿಂದಲೇ ಹುಟ್ಟುತ್ತಾನೆ. ಪ್ರತಿಯೊಬ್ಬನ ನೋಡುವ, ಕೇಳುವ, ರುಚಿನೋಡುವ ಮತ್ತು ಚಿಂತಿಸುವ ರೀತಿಯೇ ಬೇರೆ. ಪ್ರತಿಯೊಬ್ಬನಲ್ಲೂ ವಿಶಿಷ್ಟವಾದ ಸಾಮರ್ಥ್ಯವಿರುತ್ತದೆ, ಮತ್ತು ಪ್ರತಿಯೊಬ್ಬನೂ ಸೃಜನಾತ್ಮಕ ವ್ಯಕ್ತಿಯಾಗಬಲ್ಲ." (Murial James & Dorothy Jongeward, Born to Win, p.1)

ನಮ್ಮ ವಿಶಿಷ್ಟ ವ್ಯಕ್ತಿತ್ವವನ್ನು ಉಳಿಸಿಕೊಂಡು ಇತರರೊಡನೆ ಹೇಗೆ ವ್ಯವಹರಿಸಬೇಕು ಎಂಬುದನ್ನು ನಾವು ಕಲಿತಿರಬೇಕು. ಇತರರೊಡನೆ ನಾವು ಬೆಳಸುವ ಸಂಬಂಧ ನಮ್ಮ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಸಹಾಯಕವಾಗುತ್ತದೆ. ಇತರ ವ್ಯಕ್ತಿಗಳನ್ನು ಕೇವಲ ವಸ್ತುಗಳಂತೆ ಪರಿಗಣಿಸದೆ ಮಾನವೀಯ ಭಾವನೆಯಿಂದ ಅವರೊಡನೆ ವರ್ತಿಸುವುದು ಮುಖ್ಯ. " ಸಾಮಾಜಿಕ ವಸ್ತುವಿನಲ್ಲಿ ಒಂದು ವ್ಯಕ್ತಿಯನ್ನು ಗುರುತಿಸುವ ಸಾಮರ್ಥ್ಯ " ವೇ ನೈತಿಕ ಪ್ರಶ್ನೆಯೆಂದು ಸ್ವಾಮಿ ರಂಗನಾಥಾನಂದಜಿಯವರು ಹೇಳುತ್ತಾರೆ. ಹಿರಿಯರೊಡನೆ ಹೇಗೆ ನಡೆದುಕೊಳ್ಳಬೇಕು, ಕಿರಿಯರೊಡನೆ ಹೇಗೆ ಪ್ರೀತಿ ವಿಶ್ವಾಸದಿಂದ ನಡೆದುಕೊಳ್ಳಬೇಕು, ಸಮವಯಸ್ಕರೊಂದಿಗೆ ಬೆರೆತು ಹೇಗೆ ಸ್ನೇಹ ವಿಶ್ವಾಸಗಳನ್ನು ಬೆಳಸಿಕೊಳ್ಳಬೇಕು ಎಂಬುದನ್ನು ಚೆನ್ನಾಗಿ ಅಭ್ಯಸಿಸಬೇಕು.

ಹಿರಿಯರಿಗೆ ವಿಧೇಯರಾಗಿ, ಅವರ ಕೆಲಸಕಾರ್ಯಗಳಲ್ಲಿ ಸಹಕರಿಸಿದರೆ ಅವರಿಗೆ ಅತ್ಯಂತ ಆತ್ಮೀಯರಾಗಬಹುದು. ಅವರು ಹೇಳಿದ ಕೆಲಸಗಳನ್ನು ಸಂತೋಷದಿಂದ ಮಾಡಬೇಕು. ಆಗ ನಮಗೂ ಅತ್ಯಂತ ಸಂತೋಷ, ಹೆಮ್ಮೆ ಎನಿಸುತ್ತದೆ. ಹಿರಿಯರಿಗಂತೂ ನಮ್ಮ ಮಗು ಎಂತಹ ಒಳ್ಳೆಯ ಮಗು ಎಂದು ಹೇಳಿಕೊಂಡು ಹಿಗ್ಗು ಉಂಟಾಗುತ್ತದೆ. ಒಂದು ವೇಳೆ ನಮ್ಮ ಸ್ವಭಾವಕ್ಕೆ ವಿರುದ್ಧವಾದ ಮಾಡಬಾರದ ಕೆಲಸಗಳನ್ನು ಮಾಡಬೇಕಾಗಿ ಬರಬಹುದು. ಅಂತಹ ಸಂದರ್ಭಗಳಲ್ಲಿ ನಮ್ಮ ಮನಸ್ಸಿಗೆ ವಿರುದ್ಧವಾದ ಕೆಲಸಗಳನ್ನು ಮಾಡಬಾರದು. ಸಾಧ್ಯವಾದಷ್ಟು ನಯ ವಿನಯದಿಂದ ನಕಾರ ಹೇಳಲು ಪ್ರಯತ್ನಿಸಬೇಕು. ಆ ಕ್ಷಣದಲ್ಲಿ ಎಲ್ಲರಿಗೂ ಬೇಸರವಾದರೂ ಕಾಲಕ್ರಮೇಣ ಸತ್ಯದ ಅರಿವಾಗಿ ಹಿರಿಯರೂ ನಮ್ಮನ್ನು ಮೆಚ್ಚಿಕೊಳ್ಳುತ್ತಾರೆ. ಎಲ್ಲರನ್ನೂ ಮೆಚ್ಚಿಸಲು ಎಂದಿಗೂ ಸಾಧ್ಯವಿಲ್ಲ, ಹಾಗೆ ಶ್ರಮಿಸಲೂಬಾರದು. ನಮ್ಮ ಮನಸ್ಸಿಗೆ ಒಪ್ಪುವಂತೆ ನಡೆದುಕೊಳ್ಳಬೇಕು. ಯಾವ ರೀತಿಯ ಆಸೆಗೂ ಬಲಿಯಾಗಬಾರದು. ಒಮ್ಮೆ ಇತರರ ಆಸೆ ಆಮಿಷಗಳಿಗೆ ಬಲಿಯಾಗಿ ಮಾಡಬಾರದ ಕೆಲಸಗಳನ್ನು ಮಾಡಿದರೆ, ನಮ್ಮ ವ್ಯಕ್ತಿತ್ವವನ್ನೇ ಕಳೆದುಕೊಂಡು ಹೇಡಿಗಳಾಗುತ್ತೇವೆ.

ಕಿರಿಯರಲ್ಲಿ ಬೆರೆತು ಜೊತೆ ಜೊತೆಯಾಗಿ ಆಡಿ, ಕುಣಿದು, ಕಥೆಗಳನ್ನು ಹೇಳಿ ಅವರ ಮನವನ್ನು ಒಲಿಸಿಕೊಂಡು ಅವರೂ ಸಹ ಉತ್ತಮ ವ್ಯಕ್ತಿತ್ವನ್ನು ಬೆಳೆಸಿಕೊಳ್ಳಲು ಮಾರ್ಗದರ್ಶನ ಮಾಡಬೇಕು. ಮಕ್ಕಳಿಗೆ ಯಾರೊಂದಿಗಾದರೂ ಒಮ್ಮೆ ಪ್ರೀತಿ ವಿಶ್ವಾಸ ಉಂಟಾದರೆ ಸಾಕು ಅವರನ್ನೇ ಅಂಟಿಕೊಂಡು ಹೇಳಿದಂತೆ ಕೇಳುತ್ತಾರೆ.

ನಮ್ಮ ಜೊತೆಯವರಲ್ಲಿ ಉತ್ತಮ ಸ್ವಭಾವದವರನ್ನು ಗೆಳೆಯರನ್ನಾಗಿ ಮಾಡಿಕೊಂಡಾಗ ಒಬ್ಬರಿಗೊಬ್ಬರು ಸೇರಿ ಉತ್ತಮ ಕಾರ್ಯಗಳನ್ನು ಮಾಡಬಹುದು. ಇನ್ನೂ ಹೆಚ್ಚಿನ ರೀತಿಯಲ್ಲಿ ಉತ್ತಮ ಸ್ವಭಾವಗಳನ್ನು ಬೆಳೆಸಿಕೊಳ್ಳಬಹುದು. ಬೇರೆ ಗೆಳೆಯರನ್ನು ಕೆಟ್ಟ ದಾರಿಯಿಂದ ವಿಮುಖರಾಗಿ ಒಳ್ಳೆಯ

**ಜಗತ್ತಿನಲ್ಲಿ ಜೀವಿಸುವುದಕ್ಕೇ ಅತ್ಯಂತ ಅಪಾಯಕಾರಿ ಪರಿಸ್ಥಿತಿ ಉಂಟಾಗಿರುವುದಕ್ಕೆ ಕಾರಣ ಕೆಟ್ಟದ್ದನ್ನು ಮಾಡುವ ಜನರಲ್ಲ, ಆದರೆ ಕೆಟ್ಟದ್ದನ್ನು ನೋಡಿಯೂ ಸುಮ್ಮನಿರುವ ಸಜ್ಜನರು.**
*– ಆಲ್ಬರ್ಟ್ ಐನ್‌ಸ್ಟೈನ್*

ದಾರಿಯಲ್ಲಿ ನಡೆಯುವಂತೆ ಮಾಡಬಹುದು. ಈ ರೀತಿ ಬೇರೆಯವರಿಂದ ಅನೇಕ ಹೊಸ ಹೊಸ ಜ್ಞಾನವೂ ತಿಳುವಳಿಕೆಯೂ ಮೂಡುತ್ತದೆ.

ಆಟ ಪಾಠಗಳಲ್ಲಿ ಭಾಗವಹಿಸಬೇಕು. ಶಾಲಾಕಾಲೇಜುಗಳಲ್ಲಿದ್ದಾಗಿನಿಂದಲೂ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಇತರರೊಡನೆ ಬೆರೆತು ಆಟದ ಮನೋಭಾವನೆಯನ್ನು ಬೆಳೆಸಿಕೊಂಡರೆ, ಜೀವನದ ಜಯಾಪಜಯಗಳನ್ನೂ ಅದೇ ಮನೋಭಾವದಿಂದ ಎದುರಿಸಲು ಸಾಧ್ಯವಾಗುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ, ಅತೃಪ್ತಿಕರ ಕೌಟುಂಬಿಕ ಹಾಗೂ ಸಾಮಾಜಿಕ ಪರಿಸ್ಥಿತಿಯಿಂದಾಗಿ, ಮತ್ತು ಭ್ರಷ್ಟ ಶಿಕ್ಷಣ ಪದ್ಧತಿಯಿಂದಾಗಿ, ವಿದ್ಯಾರ್ಥಿಗಳಿಗೆ ಆಟವಾಡುವುದಕ್ಕೇ ಸಮಯ ದೊರೆಯದಿರುವುದು, ಅವರು ಆ ಪ್ರವೃತ್ತಿಯನ್ನೇ ಕಳೆದುಕೊಳ್ಳುತ್ತಿರುವುದು ತುಂಬ ಶೋಚನೀಯ. ಈ ಪರಿಸ್ಥಿತಿ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಹಿತವಲ್ಲ. ಆಟಗಳಲ್ಲಿ ನಿಯಮಾವಳಿಗಳನ್ನು ಸರಿಯಾಗಿ ಪಾಲಿಸುವುದನ್ನು ಕಲಿತು, ಇದೇ ರೀತಿ ಬೇರೆ ಕ್ಷೇತ್ರಗಳಲ್ಲಿಯೂ ನಿಯಮಬದ್ಧರಾಗಿರಲು ಕಲಿಯಬಹುದು. ಸಹ ಆಟಗಾರರೊಂದಿಗೆ ಸ್ನೇಹಮಯವಾಗಿರುವುದು, ಒಂದು ವೇಳೆ ನಿಯಮ ಮೀರಿ ಮೋಸದ ಆಟ ಆಡುವುದನ್ನು ತಪ್ಪು ಎಂದು ತೋರಿಸುವುದು, ಉತ್ತಮ ಆಟಗಾರರನ್ನು ಮೆಚ್ಚುವುದು, ತಂಡಕ್ಕಾಗಿ ಅದರ ಗೆಲುವಿಗಾಗಿ ಶ್ರಮಿಸುವುದು, ಇವೆಲ್ಲ ಸ್ವಭಾವಗಳನ್ನು ಬೆಳಸಿಕೊಳ್ಳಬೇಕು. ಇವೆಲ್ಲವೂ ಮುಂದೆ ನಮ್ಮ ಜೀವನದಲ್ಲಿ ನಿಯಮಗಳನ್ನು ಪಾಲಿಸಲು, ಎಲ್ಲವನ್ನೂ ಒಂದು ಕ್ರೀಡಾ ಮನೋಭಾವದಿಂದ ಸ್ವೀಕರಿಸಲು ಅನುಕೂಲವಾಗುತ್ತವೆ.

ಸಾಹಿತ್ಯ ಮತ್ತು ಭಾಷಾ ಚಟುವಟಿಕೆಗಳಲ್ಲಿ, ಭಾಷಣ ಸ್ಪರ್ಧೆ, ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು. ಜ್ಞಾನವು ವೃದ್ಧಿಯಾದಂತೆಲ್ಲ ಅನೇಕ ಉತ್ತಮ ಭಾವನೆಗಳು ಮೂಡಿ ಅನೇಕ ವಿಷಯಗಳು ತಿಳಿದು ನಮ್ಮ ರೀತಿ ನೀತಿಗಳೂ ಉತ್ತಮಗೊಳ್ಳುತ್ತವೆ. ನಮ್ಮ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿ ವ್ಯಕ್ತಿತ್ವವನ್ನು ಅಂದಗೊಳಿಸುತ್ತವೆ. "ಜ್ಞಾನಕ್ಕಿಂತ ಪವಿತ್ರವಾದುದು ಯಾವುದೂ ಇಲ್ಲ" (**ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ**) ಎಂದು ಶ್ರೀಕೃಷ್ಣನು ಹೇಳುತ್ತಾನೆ. ನಾವು ಜ್ಞಾನವನ್ನು ಪ್ರೀತಿಸಬೇಕು. "ವಿದ್ಯಾರ್ಥಿ" ಎಂದರೆ ಜ್ಞಾನವನ್ನು ಅರಸುವವನು ಎಂದು, ಹೇಗೋ ಪರೀಕ್ಷೆಯಲ್ಲಿ ಪಾಸು ಮಾಡಿ ಕೇವಲ ಡಿಗ್ರಿಯನ್ನು ಪಡೆಯುವವನಲ್ಲ. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವುದರಿಂದ ಶಾರೀರಿಕ ಹಾಗೂ ಮಾನಸಿಕ ಆರೋಗ್ಯಕ್ಕೂ ಉಪಯೋಗವಾಗುತ್ತದೆ. ಆರೋಗ್ಯವನ್ನು ಕಾಪಾಡಿಕೊಂಡು ಅದಕ್ಕೆ ತಕ್ಕ ಎಚ್ಚರಿಕೆಯನ್ನು ವಹಿಸಿ, ಆರೋಗ್ಯವಂತರಾಗಿದ್ದರೆ ಎಂತಹ ಶ್ರಮ ವನ್ನಾದರೂ ಸಹಿಸಿ ಧೈರ್ಯದಿಂದ ನಮ್ಮ ಧ್ಯೇಯವನ್ನು ಸಾಧಿಸ ಬಹುದು.

ಒಳ್ಳೆಯ ಕಾರ್ಯಗಳಿಗೆ ಹೇಗೆ ಬೆಂಬಲ ಕೊಡುತ್ತೇವೋ ಹಾಗೆಯೇ ಕೆಟ್ಟವುಗಳನ್ನು ಖಂಡಿಸಬೇಕು. ಉತ್ತಮ ವ್ಯಕ್ತಿಗಳು ಕೆಟ್ಟದ್ದನ್ನು ಪ್ರತಿಭಟಿಸದಿರುವುದರಿಂದಲೆ ಸಮಾಜದಲ್ಲಿ ಇಷ್ಟೊಂದು ಅನ್ಯಾಯ ಅತ್ಯಾಚಾರಗಳು ಹಬ್ಬಿಕೊಂಡಿರುವುದು. ಕೇವಲ ಒಳ್ಳೆಯತನವಲ್ಲ, ಶಕ್ತಿಯುತವಾದ ಒಳ್ಳೆಯತನ ನಮಗಿಂದು ಬೇಕಾಗಿದೆ. ಒಳಿತಿನ ಶಕ್ತಿಯಲ್ಲಿ ನಮಗೆ ದೃಢ ವಿಶ್ವಾಸವಿರಬೇಕೆಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ನಾವು ಮಾಡುವ ಕೆಲಸ ಕಾರ್ಯಗಳು ಬೇರೆಯವರಿಗೆ ಮಾದರಿಯಾಗಬೇಕು. ನಮ್ಮ ರೀತಿನೀತಿಗಳೂ ಉತ್ತಮವಾಗಿರಬೇಕು. ಒಳ್ಳೆಯ ಕೆಲಸಗಾರ ಬೇರೆಯವರಿಂದರೂ ಕೆಲಸ ಮಾಡಿಸಬಲ್ಲ ಎಂಬ ಹೇಳಿಕೆ ಅಕ್ಷರಶಃ ನಿಜ. ಸಮಯಕ್ಕೆ ಸರಿಯಾಗಿ ತಮ್ಮ ಕಾರ್ಯ ಕ್ಷೇತ್ರಕ್ಕೆ ಹಾಜರಾಗದೆ ಇರುವ ಅಧಿಕಾರಿಗಳು ಅಥವಾ ಶಾಲಾ ಮುಖ್ಯೋಪಾಧ್ಯಾಯರು ತಮ್ಮ ಸಹೋದ್ಯೋಗಿಗಳನ್ನು ತಡವಾಗಿ ಬಂದಾಗ ಅವರನ್ನು ಪ್ರಶ್ನಿಸಲು ಹೇಗೆ ಸಮರ್ಥರಾದಾರು? ಒಬ್ಬ ಮುಖ್ಯಸ್ಥನು ಅಥವಾ ಅಧಿಕಾರಿಯು "ಎಲ್ಲಾ ಸೇರಿ ಈ ಕೆಲಸವನ್ನು ಬೇಗ ಮಾಡಿ ಮುಗಿಸೋಣ ಬನ್ನಿ" ಎಂದು ಹೇಳಿ ತಾನೂ ಜೊತೆಯಲ್ಲಿಯೆ ಇದ್ದಾಗ ಅವರ ಒಂದು ಇರುವಿಕೆಯೇ ಎಲ್ಲರಿಗೂ ಉತ್ಸಾಹ ತುಂಬಿ ಉತ್ತೇಜಿತರಾಗಿ ತಮ್ಮ ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವಂತಾಗುತ್ತದೆ. ಒಂದಾದ ಮೇಲೆ ಒಂದರಂತೆ ಕೆಲಸಗಳೆಲ್ಲ ಸುಸೂತ್ರವಾಗಿ ನಡೆಯುತ್ತವೆ. ಇದೇ ವ್ಯಕ್ತಿತ್ವದ ಪ್ರಭಾವ.

ಪ್ರಾಮಾಣಿಕರಾಗಿದ್ದು, ಕರ್ತವ್ಯಶೀಲರಾಗಿದ್ದಾಗ ನಮ್ಮ ವ್ಯಕ್ತಿತ್ವಕ್ಕೆ ಬೆಲೆ ಬರುತ್ತದೆ. ಎಲ್ಲಿಗೆ ಹೋದರೂ ಗೌರವ, ಮರ್ಯಾದೆ ಲಭಿಸುತ್ತದೆ. ಕೆಲಸ ಕಾರ್ಯಗಳಲ್ಲಿ ಜಯ ಲಭಿಸುತ್ತದೆ. ಆದರೆ ನಾಚಿಕೆ, ಸಂಕೋಚಗಳನ್ನು ದೂರಮಾಡಬೇಕು. ಇಲ್ಲವಾದರೆ ನಮಗೆ ಬೇಕಾದವರೂ ದೊರೆಯುವುದಿಲ್ಲ, ಸ್ನೇಹಿತರನ್ನೂ ಪಡೆಯಲಾಗುವುದಿಲ್ಲ. ನಮ್ಮ ಸಮಯಕ್ಕೆ ಸರಿಯಾದ ಸಹಕಾರ ದೊರಕದೆ, ಬೇರೆಯವರ ಸಲಹೆಗಳೂ ದೊರಕದೇ ನಾವೇ ನಮ್ಮ ಉನ್ನತಿಯನ್ನು ಕಾಣಬೇಕಾಗುತ್ತದೆ. ನಾವೇ ಎಲ್ಲ ರೀತಿಯಲ್ಲಿ ಒಂಟಿಯಾಗಿ ಸಂಕಟ ಪಡಬೇಕಾಗುತ್ತದೆ.

ನಮ್ಮ ಉಡುಗೆತೊಡುಗೆಗಳೂ ನಮ್ಮ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತವೆ ಮತ್ತು ಒಬ್ಬ ವ್ಯಕ್ತಿಯ ಸ್ವಭಾವವನ್ನು

ತಿಳಿಸುತ್ತವೆ. ಆಕರ್ಷಕವಾದ ಉಡುಪು ಧರಿಸುವುದು ಮುಖ್ಯವಲ್ಲ. ನಮಗೆ ಇಷ್ಟವಾದ ಸರಳ ಉಡುಪುಗಳನ್ನು ಧರಿಸಿದಾಗ ಎಂತಹ ನೆಮ್ಮದಿಯುಂಟಾಗುತ್ತದೆ! ಆಯಾ ಸಂದರ್ಭಕ್ಕೆ ತಕ್ಕಂತೆ ಉಡುಪುಗಳನ್ನು ಧರಿಸಬೇಕು. ಶಾಲೆಗೆ ಹೋಗುವಾಗ, ಕಛೇರಿಗೆ ಹೋಗುವಾಗ ಒಂದು ರೀತಿಯ ಶಿಸ್ತಿನ ಉಡುಪಾದರೆ ಮದುವೆ ಮುಂಜಿಯಂತಹ ಶುಭ ಸಮಾರಂಭಗಳಿಗೆ ಅಂದವಾದ ಉಡುಪುಗಳನ್ನು ಧರಿಸಬೇಕು. ನಾವು ಜನರಿಗೆ ಕಾಣಿಸಿಕೊಳ್ಳುವ ರೀತಿಯಿಂದ ಅವರು ನಮ್ಮನ್ನು ಅಳೆಯುತ್ತಾರೆ.

ನಾವು ಆಡುವ ಪ್ರಯೋಗಿಸುವ ಭಾಷೆಯೂ ನಮ್ಮ ವ್ಯಕ್ತಿತ್ವವನ್ನು ವ್ಯಕ್ತಪಡಿಸುತ್ತದೆ. ಭಾಷೆಯಲ್ಲಿ ನಯ ವಿನಯವಿರಬೇಕು. ಉತ್ತಮವಾದ ಪದಗಳನ್ನು ಉಪಯೋಗಿಸಬೇಕು. ಭಾಷೆಯಲ್ಲೂ ಮಾತನಾಡುವುದರಲ್ಲೂ ಮೇಧಾವಿಗಳಾಗಿರಬೇಕು. ಸಂಸ್ಕೃತದಲ್ಲಿ ಒಂದು ಹೇಳಿಕೆಯಿದೆ :

**ಪ್ರಿಯವಾಕ್ಯಪ್ರದಾನೇನ ಸರ್ವೇ ತುಷ್ಯಂತಿ ಜಂತವಃ|**
**ತಸ್ಮಾತ್ತದೇವ ದಾತವ್ಯಂ ವಚನೇ ಕಾ ದರಿದ್ರತಾ ||**

"ಪ್ರಿಯವಾದ ವಾಕ್ಯಗಳಿಂದ ಎಲ್ಲ ಪ್ರಾಣಿಗಳೂ ಸಂತೋಷಗೊಳ್ಳುತ್ತವೆ. ಆದ್ದರಿಂದ ಪ್ರಿಯವಾಕ್ಯವನ್ನೇ ನುಡಿಯಬೇಕು. ಮಾತಿಗೂ ದಾರಿದ್ರ್ಯವೇ?"

ತನ್ನ ವ್ಯಕ್ತಿತ್ವವನ್ನು ಉತ್ತಮ ರೀತಿಯಲ್ಲಿ ರೂಪಿಸಿಕೊಂಡು ಎಲ್ಲರೊಂದಿಗೆ ವಿಹಿತವಾಗಿ ಸ್ನೇಹಮಯವಾಗಿ ನಡೆದುಕೊಳ್ಳುವ ವ್ಯಕ್ತಿ ಎಲ್ಲರಿಗೂ ಪ್ರಿಯನಾಗುತ್ತಾನೆ. ಅವನ ವ್ಯಕ್ತಿತ್ವವು ಇತರರ ಮೇಲೂ ಪರಿಣಾಮ ಬೀರಿ ಅವರನ್ನೂ ಉತ್ತಮ ದಾರಿಗೆ ಎಳೆಯುತ್ತದೆ. ಎಲ್ಲರೂ ಅಂತಹವನ ಸಲಹೆ, ಸಹಕಾರಗಳನ್ನು ಪಡೆಯುತ್ತಾರೆ. ಇದು ಹೀಗೆ ಒಬ್ಬರಿಂದೊಬ್ಬರಿಗೆ ಹರಡುತ್ತಾ ಹೋಗಿ ಭಾವೈಕ್ಯತೆಗೆ ದಾರಿ ಮಾಡಿಕೊಡುತ್ತದೆ. ❑

# ಮಾನವೀಯ ಮೌಲ್ಯಗಳು

ಅ. ಮೃತ್ಯುಂಜಯ

ನಮ್ಮ ಸಮಾಜದಲ್ಲಿ ಮಾನವ ತನ್ನ ಮೌಲ್ಯಗಳನ್ನು ಕಳೆದುಕೊಳ್ಳುತ್ತಿದ್ದಾನೆ. ಆದರೆ ಆ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಸುಖ ಜೀವನ ನಡೆಸಬಹುದು. ಇಲ್ಲವಾದರೆ ಜಂಜಾಟಗಳ ನಡುವೆ ಸಿಲುಕಿ ಜೀವನವನ್ನು ಸಾಗಿಸುವುದೇ ಕಷ್ಟವಾಗುತ್ತದೆ. ಆದುದರಿಂದ ಮಾನವನ ಮೌಲ್ಯಗಳತ್ತ ಅವಲೋಕಿಸೋಣ.

ಮಾನವೀಯ ಮೌಲ್ಯಗಳನ್ನು ೮ ಭಾಗಗಳಾಗಿ ವಿಭಾಗಿಸಬಹುದು. ೧. ಬದುಕುವ ಕಲೆ, ೨. ಉತ್ಸಾಹದಿಂದಿರುವ ಕಲೆ, ೩. ನಾಯಕತ್ವದ ಕಲೆ, ೪. ಯೋಚಿಸುವ ಕಲೆ, ೫. ಮಾತಿನ ಕಲೆ, ೬. ಕಲಿಯುವ ಕಲೆ, ೭. ಸಂತೋಷದ ಕಲೆ, ೮. ಗುಣಗಳನ್ನು ವೃದ್ಧಿಸುವ ಕಲೆ.

**ಬದುಕುವ ಕಲೆ** : ಮಾನವನು ಬದುಕುವ ಕಲೆಯನ್ನು ಮೊದಲು ಕಲಿತಿರಬೇಕು. ಉತ್ತಮ ಸ್ನೇಹಿತರನ್ನು ಸಂಪಾದಿಸುವ ಕಲೆಯನ್ನು ರೂಢಿಸಿ ಕೊಂಡಿರಬೇಕು. ಅದೇ ರೀತಿ ಪ್ರಾಮಾಣಿಕತೆಯಿಂದ ಬದುಕುವ ರೀತಿ ಅರಿತಿರಬೇಕು ಕೆಲಸಕ್ಕೆ ಬಾರದ ವಿಷಯದ ಬಗ್ಗೆ ಚರ್ಚೆ ಬಿಡಬೇಕು. ಬೇರೆಯವರ ಒಳ್ಳೆಯ ಗುಣಗಳನ್ನು ಅಳವಡಿಸಿ ಕೊಳ್ಳುವತ್ತ ಗಮನ ಹರಿಸಬೇಕು. ಇದು ಬದುಕುವ ಕಲೆ ಯಾಗಿರುತ್ತದೆ.

**ಉತ್ಸಾಹದಿಂದಿರುವ ಕಲೆ** :ಆಲಸ್ಯವನ್ನು ತೊರೆದು ಯಾವಾಗಲೂ ಚಟುವಟಿಕೆಯಿಂದ ಕೂಡಿದ್ದರೆ ಜೀವನ ಉತ್ಸಾಹಭರಿತವಾಗುತ್ತದೆ. ಕೆಟ್ಟ ಚಟಗಳಿಗೆ ಬಲಿಯಾಗಬಾರದು. ಶಿಸ್ತಿನಿಂದ ವರ್ತಿಸುವುದು ಸಹ ಒಂದು ಕಲೆಯಾಗಿರುತ್ತದೆ.

**ನಾಯಕತ್ವದ ಕಲೆ** : ಇದರಲ್ಲಿ ಮುಖ್ಯವಾಗಿ ನುಡಿದಂತೆ ನಡೆಯುವ ಕಲೆಯನ್ನು ಮೊದಲು ಉಳಿಸಿಕೊಳ್ಳಬೇಕಾಗುತ್ತದೆ. ಜೊತೆಗೆ ಜವಾಬ್ದಾರಿಗಳನ್ನು ಅರಿತು ನಡೆಯಬೇಕಾಗುತ್ತದೆ. ಬೇರೆಯವರ ಶಕ್ತಿಯನ್ನು ಗುರುತಿಸಬೇಕು. ಅವರಿಗೆ ಪ್ರೋತ್ಸಾಹ ನೀಡುವುದು ನಾಯಕತ್ವದ ಗುಣವಾಗಿದೆ.

**ಆಲೋಚಿಸುವ ಕಲೆ** : ಯಾವಾಗಲೂ ಒಳ್ಳೆಯದನ್ನು ಯೋಚಿಸಬೇಕು. ಕ್ರಮಬದ್ಧವಾದ ಯೋಚನಾಶಕ್ತಿಯನ್ನು ಬೆಳೆಸಿಕೊಳ್ಳಬೇಕು. ವಿಷಯಗಳನ್ನು ಕೇಂದ್ರೀಕರಿಸುವ ಕಲೆಯನ್ನು ಹೊಂದಿರಬೇಕಾಗುತ್ತದೆ.

**ಮಾತಿನ ಕಲೆ** : ಕಡಿಮೆ ಮಾತನಾಡುವುದನ್ನು ಮೊದಲು ಕಲಿತಿರಬೇಕು. ನಿಧಾನವಾಗಿ ಮಧುರವಾಗಿ ಬೇರೆಯವರಿಗೆ ಅರ್ಥವಾಗುವಂತೆ ಮಾತನಾಡಬೇಕು. ಅದೇ ರೀತಿ ಮಾತನ್ನು ಕೇಳುವ ವ್ಯವಧಾನವನ್ನು ಅರಿತಿರಬೇಕು. ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು ಎಂಬ ಗಾದೆಯಂತೆ ಮಾತು ಇರಬೇಕು.

**ಕಲಿಯುವ ಕಲೆ** : ಯಾವಾಗಲೂ ಸಹ ವಿದ್ಯಾರ್ಥಿಯಾಗಿರುವುದು ಹಾಗೂ ಸದಾ ಎಚ್ಚರದಿಂದ ಇರುವುದು. ಸದಾ ಎಚ್ಚರದಿಂದಿರದ ವ್ಯಕ್ತಿ ಏನನ್ನೂ ಸಾಧಿಸಲಾರ ಎಂಬ ನುಡಿಯಂತೆ ಜೀವನದಲ್ಲಿ ಎಚ್ಚರ ಅಗತ್ಯ. ಓದುವಾಗ ಸರಿಯಾಗಿ ಕ್ರಮಬದ್ಧವಾಗಿ ಓದುವುದು ಹಾಗೂ ಅದನ್ನು ಮೆಲುಕು ಹಾಕುವುದು ಸಹ ಕಲಿತಿರಬೇಕು. ಇಲ್ಲದಿದ್ದರೆ ಉಪಯೋಗವಿಲ್ಲ.

**ಸಂತೋಷವಾಗಿರುವ ಕಲೆ** : ಯಾವಾಗಲೂ ಸಹ ನಗುನಗುತ್ತಾ

ಇರಬೇಕು. ಇದ್ದಿದ್ದರಲ್ಲಿಯೇ ತೃಪ್ತಿಯನ್ನು ಕಾಣುವಂತಾದರೆ ಆಗ ಸಂತೋಷದಿಂದ ಇರಬಹುದು. ಹಾಸಿಗೆ ಇದ್ದಷ್ಟು ಕಾಲು ಚಾಚುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು.

**ಗುಣಗಳನ್ನು ವೃದ್ಧಿಸುವ ಕಲೆ :** ಹೆಚ್ಚು ಹೆಚ್ಚು ಸದ್ಗುಣಗಳನ್ನು ಬೆಳೆಸಿಕೊಳ್ಳುವುದಲ್ಲದೆ, ಅವುಗಳ ಬಲವನ್ನೂ ವರ್ಧಿಸಬೇಕು. ಕೇವಲ ಚಿಂತನೆಯಿಂದ ಇದು ಸಾಧ್ಯವಾಗುವುದಿಲ್ಲ, ಕ್ರಿಯಾತ್ಮಕವಾಗಿ ನಮ್ಮನ್ನು ಅವುಗಳಲ್ಲಿ ತೊಡಗಿಸಿಕೊಳ್ಳಬೇಕು. ಯಾವ ಕರ್ಮವನ್ನು ನಾನು ಮಾಡುತ್ತೇನೆಯೋ ಅದನ್ನು ನೋಡಿ ಬೇರೆಯವರು ಮಾಡುತ್ತಾರೆ ಎಂಬ ಪರಿಕಲ್ಪನೆಯೊಂದಿಗೆ ನಮ್ಮ ನಡೆನುಡಿಗಳನ್ನು ತಿದ್ದಿಕೊಳ್ಳಬೇಕು.

ಎಲ್ಲರಿಗಿಂತ ಧನವಂತರೆಂದರೆ ಯಾರಲ್ಲಿ ದೈವೀಗುಣಗಳಿವೆಯೋ, ಯಾರ ಬಳಿ ಶಾಂತಿಯ ಶಕ್ತಿ ಇದೆಯೋ, ಯಾರ ಬಳಿ ಪವಿತ್ರತೆಯ ಪ್ರಕಾಶವಿದೆಯೋ, ಸತ್ಯತೆಯ ಶಕ್ತಿ ಇದೆಯೋ ಅಂತಹವರು. ನಿನ್ನೆಯ ಯಾವುದೇ ಚಿಂತೆಯ ಬಗ್ಗೆ ನೆನಪಿಸಿಕೊಂಡು ಇಂದಿನ ಶ್ರೇಷ್ಠ ಸಮಯವನ್ನು ಹಾಳು ಮಾಡುವುದು ಸರಿಯಲ್ಲ. ಮನಸ್ಸಿನಲ್ಲಿ ಅಶುದ್ಧ ಚಿಂತನೆ ಮೂಡಿದರೆ ಶುದ್ಧ ಚಿಂತನೆಯ ಶಕ್ತಿ ಕಡಿಮೆಯಾಗುತ್ತದೆ.

ಆದುದರಿಂದ ನಾವು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಬಾಳಿದರೆ ಜೀವನ ಸುಖಮಯವಾಗುವುದರಲ್ಲಿ ಸಂದೇಹವೇ ಇಲ್ಲ. ಎಲ್ಲರೂ ಈ ಕುರಿತು ಆಲೋಚಿಸುವುದು ಒಳಿತಲ್ಲವೇ?

## ಪರಿಶ್ರಮದ ಫಲ

ಸರ್.ಎಂ. ವಿಶ್ವೇಶ್ವರಯ್ಯನವರು ಅಮೆರಿಕದಲ್ಲಿ ಪ್ರವಾಸ ಕೈಗೊಂಡಿದ್ದಾಗ ನಡೆದ ಘಟನೆ ಇದು. ಅವರಿಗೆ ಒಂದು ಸಣ್ಣ ಯಂತ್ರದ ಭಾಗವೊಂದು ಬೇಕಾಗಿತ್ತು. ಷಿಕಾಗೋ ಪಟ್ಟಣದ ಒಂದು ಅಂಗಡಿಯಲ್ಲಿ ಅದು ದೊರಕುತ್ತದೆ ಎಂದು ಅವರಿಗೆ ತಿಳಿಯಿತು. ಆ ಅಂಗಡಿಗೆ ಅವರು ಭೇಟಿಕೊಟ್ಟು, ತಮಗೆ ಬೇಕಾದದ್ದೇನು ಎಂಬುದನ್ನು ಮಾಲೀಕರಿಗೆ ತಿಳಿಸಿದರು. ಅವರು ಅದು ತಮ್ಮಲ್ಲಿ ದೊರೆಯುತ್ತಿಲ್ಲವೆಂದೂ, ಆರ್ಡರ್ ಕೊಟ್ಟರೆ ನಾಲ್ಕೈದು ದಿನಗಳಲ್ಲಿ ಅದನ್ನು ತಯಾರುಮಾಡಿಸಿಕೊಡುವುದಾಗಿಯೂ ಹೇಳಿದರು. ಅದರ ಬೆಲೆ ಹತ್ತು ಡಾಲರು ಎಂದು ಹೇಳಿದರು. ಸರ್.ಎಂ. ವಿ. ಯವರು ಹೇಳಿದರು: "ನೋಡಿ, ನಾನು ಹತ್ತು ಡಾಲರು ಕೊಡುತ್ತೇನೆ. ಆದರೆ ಶುಕ್ರವಾರ ನೀವು ತಪ್ಪದೆ ಕೊಡಬೇಕು. ಏಕೆಂದರೆ ಶನಿವಾರ ನಾನು ಈ ಊರು ಬಿಡುತ್ತಿದ್ದೇನೆ." ಅಂಗಡಿಯವರು ಒಪ್ಪಿದರು.

ಶುಕ್ರವಾರ ವಿಶ್ವೇಶ್ವರಯ್ಯನವರು ನಿಗದಿಯಾದ ಕಾಲಕ್ಕೆ ಅಂಗಡಿಗೆ ಹೋದರು. ಆದರೆ ಮಾಲೀಕರು ಇರಲಿಲ್ಲ. ಒಬ್ಬ ಹುಡುಗ ಮಾತ್ರ ಇದ್ದ. ಎಂ.ವಿ.ಯವರಿಗೆ ಬೇಕಾಗಿದ್ದ ಯಂತ್ರದ ಭಾಗ ತಯಾರಾಗಿತ್ತು. ವಿಶ್ವೇಶ್ವರಯ್ಯನವರಿಗೆ ತುಂಬ ಸಂತೋಷವಾಯಿತು. ಹೇಳಿದರು: "ನೋಡಿ, ಕ್ಲುಪ್ತಕಾಲಕ್ಕೆ, ನನಗೆ ಬೇಕಾಗಿದ್ದ ಯಂತ್ರಭಾಗವನ್ನು ತಯಾರು ಮಾಡಿಸಿಕೊಟ್ಟಿದ್ದೀರಿ. ಆದ್ದರಿಂದ ಹತ್ತು ಡಾಲರ್ ಜೊತೆಗೆ ಇನ್ನು ಒಂದು ಡಾಲರ್ ಸೇರಿಸಿಕೊಟ್ಟಿದ್ದೇನೆ." ಹಾಗೆ ಹೇಳಿ, ಹನ್ನೊಂದು ಡಾಲರ್ ಕೊಟ್ಟು, ಬಂದರು.

ಸರ್. ಎಂ.ವಿ.ಯವರು ಮಲಗಿದ್ದ ಕೊಠಡಿಯ ಬಾಗಿಲನ್ನು ರಾತ್ರಿ ಹತ್ತುಗಂಟೆಗೆ ಯಾರೋ ತಟ್ಟಿದರು. ಬಾಗಿಲು ತೆರೆದು ನೋಡಿದರೆ ಅಂಗಡಿಯ ಮಾಲೀಕರು! ಸರ್.ಎಂ.ವಿ.ಯವರಿಗೆ ಒಂದು ಡಾಲರ್ ಹಿಂದಕ್ಕೆ ಕೊಡುತ್ತಾ ಅವರು ಹೇಳಿದರು: "ನಾನು ಮಾಡಿರುವ ಕೆಲಸಕ್ಕೆ ಸಲ್ಲಬೇಕಾದದ್ದು ಹತ್ತೇ ಡಾಲರು. ಇನ್ನೊಂದನ್ನು ತೆಗೆದುಕೊಳ್ಳಲಾರೆ. ದಯವಿಟ್ಟು ಹಿಂತೆಗೆದುಕೊಳ್ಳಿ. ಇದು ನನ್ನ ಪರಿಶ್ರಮದಿಂದ ಪಡೆದ ಹಣವಲ್ಲ. ಮತ್ತೆ, ಇದೊಂದು ಅಭ್ಯಾಸವಾದರೆ ಸ್ವಂತ ಪರಿಶ್ರಮದಿಂದ ಹಣ ಗಳಿಸುವುದರಲ್ಲಿರುವ ಆನಂದವನ್ನು ನಾನು ಕಳೆದುಕೊಳ್ಳುತ್ತೇನೆ." ಆಶ್ಚರ್ಯಚಕಿತರಾದ ಸರ್.ಎಂ.ವಿಯವರು ಅಮೇರಿಕನ್ನರ ವಿಷಯದಲ್ಲಿ ಹೊಸದೊಂದು ವಿಷಯವನ್ನೇ ತಿಳಿದಂತಾಯಿತು.